**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 451/2022**

| | | | |
|---|---|---|---|
| **ಹೆಸರು** | **:** | **ಕಲಾವತಿ** | **ಚಾ.ಸಾ. 1** |
| **ಗಂಡನ ಹೆಸರು** | **:** | **ಸಂಗಾರೆಡ್ಡಿ** | **ಪ್ರಾ.ಸಾ. 4** |
| **ವಯಸ್ಸು** | **:** | **60 ವರ್ಷ** | **ದಿನಾಂಕಃ 24-07-2025** |
| **ಉದ್ಯೋಗ** | **:** | **ಕೂಲಿ ಕೆಲಸ** | |
| **ವಾಸಸ್ಥಳ** | **:** | **ಐನಾಪುರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾಸಾ-2 ರಿಂದ 9ರವರು ನನಗೆ ಗೊತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನಗೆ ಗೊತ್ತು.

ಈಗ 5 ರಿಂದ 6 ವರ್ಷಗಳ ಹಿಂದೆ ಆರೋಪಿತರ ಮನೆಯ ಹಿಂದೆ ನಾಲಾ ಹತ್ತಿರ ಶೌಚಾಲಯಕ್ಕೆ ಎಂದು ನಾನು, ಚಾಸಾ-2, 4 ರಿಂದ 9 ರವರು ಹೋಗುತ್ತಿದ್ದಾಗ ನ್ಯಾಯಾಲಯದ ಮುಂದೆ ಇರುವ ಆರೋಪಿತರು ತಮ್ಮ ಮನೆಯ ಮೇಲೆ ನಿಂತುಕೊಂಡು ನಮ್ಮನ್ನು ನೋಡುತ್ತಿದ್ದರು. ಆದ್ದರಿಂದ ನಾನು ಅವರ ವಿರುದ್ಧ ದೂರನ್ನು ನೀಡಿದ್ದೇನೆ.

ಈಗ ನೋಡುತ್ತಿರುವ ದೂರಿನಲ್ಲಿ ನನ್ನ ಹೆಬ್ಬರಳಿನ ಗುರುತು ಇದೆ. ಸದರಿ ದೂರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ NHR ವಕೀಲರಿಂದಃ**

ಮಾಣಿಕ ರೆಡ್ಡಿ ನಮ್ಮ ಕುಲದವರು. ಮಾಣಿಕ ರೆಡ್ಡಿರವರ ಮಗಳೊಂದಿಗೆ ನನ್ನ ಮಗ ಮದುವೆಯಾಗಿದ್ದಾರೆ ಎಂದರೆ ಸರಿ. ಮಾಣಿಕ ರೆಡ್ಡಿ ಮತ್ತು 1ನೇ ಆರೋಪಿ ಸಹೋದರರು ಎಂದರೆ ಸರಿ. ಮಾಣಿಕ ರೆಡ್ಡಿ ಮತ್ತು ವೀರಾರೆಡ್ಡಿರವರ ಮಧ್ಯ ಹೊಲದ ವಿಷಯವಾಗಿ ಜಗಳವಿತ್ತು ಎಂದರೆ ಸರಿ. ದಿನಾಂಕ 05-10-2021 ರಂದು ಮಾಣಿಕ ರೆಡ್ಡಿ ಮತ್ತು ವೀರಾರೆಡ್ಡಿರವರ ಮಧ್ಯ ಜಗಳವಾದಾಗ ಪೋಲಿಸರು ಬಂದು ಅವರ ಮಧ್ಯ ರಾಜೀ ಮಾಡಿರುತ್ತಾರೆ ಎಂದರೆ ಸರಿ. ದಿನಾಂಕ 05-10-2021 ರಂದು ಮಾಣಿಕ ರೆಡ್ಡಿ ಮತ್ತು ವೀರಾರೆಡ್ಡಿರವರು ಪೋಲಿಸ ಠಾಣೆಯಲ್ಲೆಯೇ ಮಧ್ಯಾಹ್ನದವರೆಗೂ ಇದ್ದರು ಎಂದರೆ ಸರಿ.

ನಮ್ಮ ಮನೆಯಲ್ಲೆ ಶೌಚಾಲಯ ಕೋಣೆ ಇಲ್ಲ. ಶಂಕ್ರಯ್ಯರವರ ಮನೆಯ ಹಿಂದೆ ಗ್ರಾಮಸ್ಥರು ಶೌಚಾಲಯಕ್ಕೆ ಹೋಗುತ್ತಾರೆ ಎಂದರೆ ಸಾಕ್ಷಿ ಅಲ್ಲಿ ಶೌಚಾಲಯಕ್ಕೆ ಸ್ಥಳವಿದೆ ಆದರೆ ನಾವು ಅಲ್ಲಿ

ಹೋಗುವುದಿಲ್ಲ ಎಂದು ನುಡಿಯುತ್ತಾರೆ. ಚಾಸಾ-2, 4 ರಿಂದ 9ರವರು ಮಾತನಾಡಿಕೊಂಡು ಒಂದೇ ಬಾರಿಗೆ ಶೌಚಾಲಯಕ್ಕೆ ಹೋಗುತ್ತೇವೆ. ಮಾಣಿಕ ರೆಡ್ಡಿ ರವರ ಮನೆಯ ಹತ್ತಿರ ಸರಕಾರ ಶೌಚಾಲಯವಿದೆ ಎಂದರೆ ಸಾಕ್ಷಿ ಅದನ್ನು ಈಗ ಮುಚ್ಚಿ ಹಾಕಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಶೌಚಾಲಯ ಯಾವಾಗಲೂ ತೆರೆದಿರುತ್ತದೆ ಮತ್ತು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಬೇರೆ ಬೇರೆ ಅವರಿಗೆ ಬೇರೆ ಬೇರೆ ಸಮಯಕ್ಕೆ ಶೌಚ ಬರುತ್ತದೆ ಎಂದರೆ ಸರಿ. ಸಾಮಾನವಾಗಿ ಮಹಿಳೆಯರು ಶೌಚಾಲಯಕ್ಕೆ ಹೋದಾಗ ಯಾರಾದರೂ ಗಂಡಸರು ಕಾಣಿಸಿಕೊಂಡರೇ ಎದ್ದು ನಿಲ್ಲುತ್ತಾರೆ ಎಂದರೆ ಸರಿ. ಶಂಕ್ರಯ್ಯರವರ ಮನೆಯ ಹಿಂದೆ ಖುಲ್ಲಾ ಜಾಗ ನಮ್ಮ ಮನೆಯ ಹತ್ತಿರ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆದರೆ ನಾವು ಅಲ್ಲಿ ಹೋಗುವುದಿಲ್ಲ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಶಂಕ್ರಯ್ಯರವರ ಮನೆಯ ಹಿಂದೆ ಮಠದ ಜಾಗವಿದೆ ಎಂದರೆ ಸರಿ. 1ನೇ ಆರೋಪಿ ಮಾಜಿ ಸೈನಿಕ ಎಂದರೆ ಸರಿ. 1ನೇ ಆರೋಪಿ ಹತ್ತಿರ ಎರಡು ಹಿರೋ ಹೊಂಡಾ ಶೋರೂಮಗಳು ಇವೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಆರೋಪಿತರು ಒಳ್ಳೆ ಜನರು ಇರುತ್ತಾರೆ ಮತ್ತು ಈ ರೀತಿ ಕೃತ್ಯ ಮಾಡುವುದಿಲ್ಲ ಹಾಗೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಒಬ್ಬಳು ಮಹಿಳೆ ಶೌಚಕ್ಕೆ ಹೋದಾಗ ಅವರ ಬಟ್ಟೆ ತಮ್ಮ ದೇಹಕ್ಕೆ ಮುಚ್ಚುತ್ತದೆ ಎಂದರೆ ಸರಿ. ಬಟ್ಟೆ ಮುಚ್ಚಿದ ಕಾರಣ ಬೇರೆ ಅವರು ನೋಡುವ ಪ್ರಶ್ನೆ ಬರುವುದಿಲ್ಲ ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡುವುದಿಲ್ಲ. ಸಾಮಾನ್ಯವಾಗಿ ಮಹಿಳೆಯರು ಬೆಳಕು ಬರುವ ಮೊದಲು ಶೌಚಾಲಯಕ್ಕೆ ಹೋಗುತ್ತಾರೆ ಎಂದರೆ ಸಾಕ್ಷಿ ಯಾವಾಗ ಶೌಚ ಬರುತ್ತದೆ ಅವಾಗ ಹೋಗುತ್ತಾರೆ ಎಂದು ನುಡಿಯುತ್ತಾರೆ.

ಆ ದಿನ ನಾನು ಶೌಚಾಲಯಕ್ಕೆ ಹೋದಾಗ ಬೆಳಗ್ಗೆ 8 ಗಂಟೆಯಾಗಿತ್ತು. ಸದರಿ ಸ್ಥಳದ ಹತ್ತಿರ ರಸ್ತೆ ಇದೆ ಮತ್ತು ಸದರಿ ರಸ್ತೆಯಲ್ಲಿ ಸಾಕಷ್ಟು ಜನ ಓಡಾಡುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅಲ್ಲಿ ನಾಲಾ ಇದೆ ಮತ್ತು ನಾಲಾದ ತೆಗ್ಗಿನಲ್ಲಿ ನಾವು ಕುಡುತ್ತೇವೆ ಎಂದು ನುಡಿಯುತ್ತಾರೆ. ಆ ದಿನ ನಾನು ಪಶ್ಚಿಮ ದಿಕ್ಕಿಗೆ ಮುಖ ಮಾಡಿ ಶೌಚಕ್ಕೆ ಕುಳಿತ್ತಿದ್ದೆ. 1ನೇ ಆರೋಪಿಯ ಮನೆಯ ಹಿಂದೆ ಬಹಳಷ್ಟು ಮರಗಳು ಇವೆ ಎಂದರೆ ಸರಿ. ಸದರಿ ಮರಗಳ ನಂತರ ತೆಗ್ಗಿನಲ್ಲಿ ನಾಲಾ ಇದೆ ಎಂದರೆ ಸರಿ. ಸದರಿ ಮನೆಗಳಿಂದ ನಾಲಾ ಕಾಣುವುದಿಲ್ಲ ಎಂದರೆ ಸಾಕ್ಷಿ ಆಗ ಆರೋಪಿತರು ತಮ್ಮ ಮನೆಯ ಮಹಡಿ ಮೇಲೆ ನಿಂತು ನೋಡುತ್ತಿದ್ದರು ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪೋಲಿಸರು ದೂರನ್ನು ನಾನು ಹೇಳಿದಂತೆ ಬರೆದಿರುತ್ತಾರೆ. ದೂರು ನೀಡಲು ಬಂದಾಗ ನನ್ನ ಜೊತೆ ಹಣಮಂತರವರು ಇದ್ದರು. ದೂರು ನೀಡಲು ಬಂದಾಗ ಸಾಯಂಕಾಲ 6 ಗಂಟೆಯಾಗಿತ್ತು. ಐನಾಪುರದಿಂದ ಚಿಂಚೋಳಿ ಗ್ರಾಮಕ್ಕೆ 1 ಗಂಟೆಯಲ್ಲಿ ಬರಬಹುದು ಎಂದರೆ ಸರಿ. ಸಾವಾನ್ಯವಾಗಿ ಬೆಳಗ್ಗೆ 8 ಗಂಟೆ ಗ್ರಾಮಸ್ಥರು ತಮ್ಮ ಹೊಲಕ್ಕೆ ಕೆಲಸಕ್ಕೆಂದು ಹೋಗುತ್ತಾರೆ ಎಂದರೆ ಸರಿ. 2ನೇ ಆರೋಪಿ 1ನೇ ಆರೋಪಿಯ ಮಗ ಎಂದರೆ

ಸರಿ. ಸಾಮಾನ್ಯವಾಗಿ ಯಾವುದೇ ಒಬ್ಬ ತಂದೆ ಮಗ ಒಟ್ಟಿಗೆ ಕೆಟ್ಟ ದೃಷ್ಟಿಯಿಂದ ನೋಡುವುದಿಲ್ಲ ಎಂದರೆ ಸಾಕ್ಷಿ ನಾನು ಹೋದಾಗ 1ನೇ ಆರೋಪಿ ಇದ್ದ ಎಂದು ನುಡಿಯುತ್ತಾರೆ. ಹಾಗಿದ್ದರೇ 2ನೇ ಆರೋಪಿಯ ವಿರುದ್ದ ಯಾಕೆ ದೂರನ್ನು ನೀಡಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಬೇರೆ ಅವರು ಹೋದಾಗ 2ನೇ ಆರೋಪಿ ತಮ್ಮ ಮನೆಯ ಮೇಲೆ ಹೋಗುತ್ತಾರೆ ಎಂದು ನುಡಿಯುತ್ತಾರೆ. ಮಾಣಿಕ ರೆಡ್ಡಿರವರ ಮಾತು ಕೇಳಿ ಆರೋಪಿತರ ವಿರುದ್ದ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ರಾಜೀ ಆದರೂ ಸಹ ಆರೋಪಿತರ ವಿರುದ್ದ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

ಸರಕಾರದಿಂದ ಪ್ರತಿ ಮನೆಯಲ್ಲಿ ಶೌಚಾಲಯ ಕಟ್ಟಿಸಿಕೊಳ್ಳಬೇಕು ಎಂಬ ಆದೇಶವಿದೆ ಎಂದರೆ ಸಾಕ್ಷಿ ನಮಗೆ ಜಾಗವಿಲ್ಲ ಎಂದು ನುಡಿಯುತ್ತಾರೆ. ನಮ್ಮ ಸಂಬಂಧಿಕರಿಗೆ ಸಹಾಯ ಮಾಡಲು ಆರೋಪಿತರ ವಿರುದ್ದ ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಗ್ರಾಮ ಪಂಚಾಯಿತಿ ವತಿಯಿಂದ ನಮ್ಮ ಗ್ರಾಮದಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡಿದ್ದಾರೆ ಎಂದರೆ ಸರಿ. ನಾನು ಪೋಲಿಸ ಠಾಣೆಯಲ್ಲಿ 1 ಗಂಟೆ ಉಳಿದುಕೊಂಡಿರುತ್ತೇನೆ. ನನ್ನ ದೂರಿನಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನಗೆ ಬಿಳಿ ಕಾಗದದ ಮೇಲೆ ಸಹಿ ಪಡೆದಿರುತ್ತಾರೆ. ನನಗೆ ಓದಲು ಬರದೇ ಇರುವ ಕಾರಣ ನನ್ನ ದೂರಿನಲ್ಲಿರುವ ಸಂಗತಿಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಸುಳ್ಳು ಕಥೆ ಕಟ್ಟಿ ಮಾಣಿಕ ರೆಡ್ಡಿ ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಮ್ಮ ಮುಂದೆ ಪೋಲಿಸರು ಪಂಚನಾಮ ಮಾಡಿದ್ದಾರೆಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರುವಿಚಾರಣೆಃ**

ನನಗೆ ತಾರೀಕು, ತಿಂಗಳು ಹಾಗೂ ವರ್ಷ ಅರ್ಥವಾಗುವುದಿಲ್ಲ ಎಂದರೆ ಸರಿ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**